# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.23 ರ ನಾಗವಾರಕ್ಕೆ ಸಂಬಂಧಿಸಿದಂತೆ ದಿನಾಂಕ: 07.05.2022 ರಂದು ಶ್ರೀ.ಇಮ್ರಾನ್.ಪಿ.ಎ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಇಮ್ರಾನ್.ಪಿ.ಎ | ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು. |
| 2 | ಶ್ರೀ.ನಾಗರಾಜು | ಸಹಾಯಕ ಅಭಿಯಂತರರು & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.23 ನಾಗವಾರ |
| 3 | ಶ್ರೀ.ಆನಂದ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 4 | ಶ್ರೀ.ರಾಯಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 5 | ಶ್ರೀ.ಸಂತೋಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 6 | ಶ್ರೀ.ಲೋಕೇಶ್.ಎನ್ | ಪಿ.ಎಸ್.ಐ ಗೋವಿಂದಪುರ ಪೊಲೀಸ್ ಠಾಣೆ |
| 7 | ಶ್ರೀಮತಿ.ಉಮಾದೇವಿ | ಯು.ಪಿ.ಹೆಚ್.ಸಿ ಕೆ.ಜಿ.ಹಳ್ಳಿ |
| 8 | ಶ್ರೀಮತಿ.ಮಂಜುಶ್ರೀ.ಜೆ | ಯು.ಪಿ.ಹೆಚ್.ಸಿ ಕೆ.ಜಿ.ಹಳ್ಳಿ |
| 9 | ಶ್ರೀ.ಸಲೀಂ ಖಾನ್ | ಕರ ವಸೂಲಿಗಾರರು |
| 10 | ಶ್ರೀ.ರಾಮ್.ಆರ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 11 | ಶ್ರೀ.ದಿಲೀಪ್.ಸಿ.ಜೆ | ಮಾರ್ಷಲ್ |
| 12 | ಶ್ರೀ.ಸಲೀಂ | ವಾರ್ಡ್ ಅಧ್ಯಕ್ಷರು |
| 13 | ಶ್ರೀ.ಶಿವಕುಮಾರ್.ಟಿ | ಸ್ಥಳೀಯರು / ಸದಸ್ಯರು |
| 14 | ಶ್ರೀ.ಬೈಲಾಲ್ | ಸ್ಥಳೀಯರು / ಸದಸ್ಯರು |
| 15 | ಶ್ರೀ.ನರಸಿಂಹರಾಜು | ಸ್ಥಳೀಯರು / ಸದಸ್ಯರು |
| 16 | ಶ್ರೀ.ರವಿ | ಸ್ಥಳೀಯರು / ಸದಸ್ಯರು |
| 17 | ಶ್ರೀ.ರವಿಚಂದರ್ | ಸ್ಥಳೀಯರು / ಸದಸ್ಯರು |
| 18 | ಶ್ರೀ.ರಾಜಪ್ಪ | ಸ್ಥಳೀಯರು / ಸದಸ್ಯರು |
| 19 | ಅಹಮ್ಮದ್ ಉಲ್ಲಾ ಖಾನ್ | ಸ್ಥಳೀಯರು / ಸದಸ್ಯರು |
| 20 | ಶ್ರೀ.ಸೈಯದ್ ಜಬೀ ಉಲ್ಲಾ | ಸ್ಥಳೀಯರು / ಸದಸ್ಯರು |
| 21 | ಶ್ರೀ.ಮುನಿಸ್ವಾಮಿ | ಸ್ಥಳೀಯರು / ಸದಸ್ಯರು |
| 22 | ಶ್ರೀ.ಹಬೀಬುಲ್ಲಾ | ಸ್ಥಳೀಯರು / ಸದಸ್ಯರು |
| 23 | ಶ್ರೀ.ಇರ್ಫಾನ್ | ಸ್ಥಳೀಯರು / ಸದಸ್ಯರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಆರೋಗ್ಯ ವೈಧ್ಯಾಧಿಕಾರಿಗಳು:-** ವಾರ್ಡ್‌ನ ವೀರಣ್ಣನಪಾಳ್ಯ ಕಾಲೋನಿಯಲ್ಲಿ ಸುಮಾರು 2500 ಜನ ಸಂಖ್ಯೆ ಇದ್ದರೂ ಸಹ ಅವರ ಸೇವೆಗೆ ಶುಶ್ರೂಶಕರು ಹಾಗೂ ಆಶಾ ಕಾರ್ಯ ಕರ್ತೆಯರು ಯಾರೂ ಕೆಲಸ ನಿರ್ವಹಿಸುತ್ತಿಲ್ಲವೆಂದು ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಸ್ಥಳೀಯರು ತಿಳಿಸಿರುತ್ತಾರೆ ಹಾಗೂ ವಾರ್ಡ್‌ನ ವ್ಯಾಪ್ತಿಯಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಶೀಘ್ರದಲ್ಲಿಯೇ ಶುಶ್ರೂಶಕರು ಹಾಗೂ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಲು ತಿಳಿಸಲಾಯಿತು. ವಾರ್ಡ್‌ನಲ್ಲಿ ಪಿ.ಹೆಚ್.ಸಿ ಕಟ್ಟಡವನ್ನು ಗುರುತಿಸಿದ್ದರೂ ಸಹ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಈ ವಿಷಯದ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)

2) ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):- ವಾರ್ಡ್ ವ್ಯಾಪ್ತಿಯಲ್ಲಿ ಮೀಟರ್ ಅಳವಡಿಸದೇ ಇಲ್ಲದೇ ಸಾರ್ವಜನಿಕರ ಅನುಕೂಲಕ್ಕಾಗಿ ಕೊಳಾಯಿಗಳನ್ನು ಅಳವಡಿಸಿದ್ದು. ಮೀಟರ್ ಅಳವಡಿಸದೇ ಇಲ್ಲದೇ ಇರುವುದರಿಂದ ಮಾಸಿಕ ಬಿಲ್ ಮೊತ್ತ ಹೆಚ್ಚಾಗಿ ಬರುತ್ತದೆ ಎಂದು ಹಾಗೂ ಗಾಂಧಿನಗರ ಪರ್ವೀನ್ ಮಸೀದಿ ಹಿಂಭಾಗದ ರಸ್ತೆಯಲ್ಲಿ ಕುಡಿಯುವ ನೀರು ಮನೆ ಮನೆಗೆ ಬರುತ್ತಿಲ್ಲವೆಂದು ಈ ವಿಷಯದ ಬಗ್ಗೆ ಆರ್.ಟಿ.ನಗರ ಕಛೇರಿಯವರಿಗೆ ವಿಚಾರಿಸಲಾಗಿ ವಿದ್ಯುತ್ ವ್ಯತಯ ಇರುವುದರಿಂದ ಕುಡಿಯುವ ನೀರನ್ನು ಸರಭರಾಜು ಮಾಡಲಾಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಸದರಿ ರಸ್ತೆಯಲ್ಲಿ ಸಾರ್ವಜನಿಕ ಕೊಳಾಯಿ ಇಲ್ಲದೆ ಇರುವುದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಪೈಪ್‌ಲೈನ್ ಮತ್ತು ಕೊಳಾಯಿ ಅಳವಡಿಸಲು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಕಲ್ಯಾಣನಗರ)

3) ಶುದ್ಧ ಕುಡಿಯುವ ನೀರಿನ ಘಟಕ:- ವಾರ್ಡ್ ವ್ಯಾಪ್ತಿಯ 30 ಕೆ.ಜಿಯಲ್ಲಿ ಬೃಹತ್ ಮಳೆ ನೀರು ಗಾಲುವೆ ಮೇಲೆ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವಿದ್ದು. ಈ ಘಟಕವು ಚಾಲ್ತಿಯಲ್ಲಿರುವುದಿಲ್ಲವೆಂದು ಅದನ್ನು ತೆಗೆಯುವಂತೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಕಡೆ ಸಿ.ಸಿ.ಕ್ಯಾಮರಗಳು ಅಳವಡಿಸದೇ ಇರುವುದರಿಂದ ಕೆಲವು ಕೃತ್ಯಗಳು ನಡೆಯುತ್ತಿದ್ದು. ಅವುಗಳನ್ನು ತಡೆಯಲು ಶೀಘ್ರವಾಗಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸಬೇಕೆಂದು ಮತ್ತು 30 ಕೆ ಜಿ ಸುತ್ತಮುತ್ತಲು ಹಳೆಯ ವಾಹನಗಳು ರಸ್ತೆ ಪಕ್ಕದಲ್ಲಿ ನಿಂತಿದ್ದು. ಸ್ಥಳೀಯರಿಗೆ ತೊಂದರೆಯಾಗುತ್ತಿರುವುದರಿಂದ ಅವುಗಳನ್ನು ತೆರವುಗೊಳಿಸಲು ಸಂಚಾರ ಪೋಲೀಸ್ ಠಾಣೆರವರಿಗೆ ತಿಳಿಸಲು ಹಾಗೂ ಸಮಧಾನನಗರ ಕೆಲವು ಅಡ್ಡರಸ್ತೆಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸುತ್ತಿಲ್ಲವೆಂದು ಹಾಗೂ ಸಮಧಾನನಗರ ಮುಖ್ಯರಸ್ತೆ, ಫಾತೀಮ ಬಡಾವಣೆ, 14ನೇ ಅಡ್ಡರಸ್ತೆ ಮತ್ತು ಮುಖ್ಯರಸ್ತೆಯ ಚರಂಡಿಯ ಹೂಳನ್ನು ತೆಗೆದು ಸ್ವಚ್ಛಗೊಳಿಸುವಂತೆ ಮತ್ತು ವೀರಣ್ಣಪಾಳ್ಯ ಎ.ಕೆ ಕಾಲೋನಿಯಲ್ಲಿ ಊರ ಹಬ್ಬ ಇರುವುದರಿಂದ ಕಾಲೋನಿಯಲ್ಲಿ ಪೈಪ್‌ಲೈನ್ ಅಳವಡಿಸುವುದು ಹಾಗೂ ಮುಖ್ಯರಸ್ತೆಗೆ ಡಾಂಬರು ಅಳವಡಿಸಬೇಕೆಂದು ಮತ್ತು ಚೂನಾ ಲೇನ್-1 & 2 ರಲ್ಲಿರುವ ಚರಂಡಿಯ ಹೂಳನ್ನು ತೆಗೆದು ಸ್ವಚ್ಛಗೊಳಿಸುವಂತೆ ಮತ್ತು ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಿ ಕೊಡಲು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರರವರು ತಿಳಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ)

4) ರಸ್ತೆ ಮೂಲಭೂತ ಸೌಕರ್ಯ :- ವಾರ್ಡ್ ವ್ಯಾಪ್ತಿಯ ವೀರಣ್ಣಪಾಳ್ಯದಿಂದ ಗೋವಿಂದಪುರ ಮುಖ್ಯರಸ್ತೆಗೆ ಮರು ಡಾಂಬರೀಕರಣ ಮಾಡಲು ಹಾಗೂ ನಾಗವಾರ ಮುಖ್ಯರಸ್ತೆಯ ಗ್ಲಾಸ್ ಫ್ಯಾಕ್ಟರಿ ಉಮರ್‌ನಗರ ಹತ್ತಿರ ಪದೇ ಪದೇ ಅಪಘಾತಗಳು ನಡೆಯುತ್ತಿದ್ದು, ಟ್ರಾಫಿಕ್ ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಅಲ್ಲಲ್ಲಿ ಕೆಲವು ವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಿಸಲು ಮತ್ತು ನಾಗವಾರ ಮುಖ್ಯರಸ್ತೆ, ಚರ್ಚ್ ರಸ್ತೆ, ಶಾಂಪುರ ಮುಖ್ಯರಸ್ತೆ, ಎ.ಎಂ.ಸಿ ರಸ್ತೆಗಳಲ್ಲಿ ಎರಡು ಬದಿಯ ಚರಂಡಿಗಳಲ್ಲಿ ಸಿಲ್ಟ್ ತುಂಬಿದ್ದು, ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ಹರಿದು ಮನೆಗಳಿಗೆ ನುಗ್ಗಿರುತ್ತದೆ ಮತ್ತು ಚರಂಡಿಯ ಮೇಲಿನ ಸ್ಲ್ಯಾಬ್‌ಗಳು ಕೆಲವು ಇಲ್ಲದೇ ಇರುವುದು ಕಂಡು ಬಂದಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುತ್ತದೆ ಎಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬಿ.ಬಿ.ಎಂ.ಪಿ ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿ.ಬಿ.ಎಂ.ಪಿ)

5) ಬೆಸ್ಕಾಂ ವಿಭಾಗ:- ವಾರ್ಡ್ ವ್ಯಾಪ್ತಿಯ ಎಲ್ಲಾ ಕಡೆಗಳಲ್ಲಿ ಕೇಬಲ್‌ಗಳನ್ನು ಅಳವಡಿಸಿದ್ದು, ಕಂಬದ ಹತ್ತಿರ ಕೇಬಲ್‌ಗಳನ್ನು ಹಾಗೆಯೇ ಬಿಟ್ಟು ಹೋಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಗುತ್ತಿರುತ್ತದೆ ಎಂದು ಮತ್ತು ರಷಾದ್‌ನಗರ 4ನೇ ಅಡ್ಡರಸ್ತೆ ನೊಬೆಲ್ ಶಾಲೆ ಹತ್ತಿರ ಹಾಲಿ ಇರುವ ಕಂಬಗಳಿಗೆ Local Fuse Boxes ಗಳನ್ನು ಅಳವಡಿಸಿದ್ದು, ಅವುಗಳು ಸುಟ್ಟುಹೋಗಿರುತ್ತದೆ ಎಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ, ಇ-9, ಹೊರವರ್ತುಲ ರಸ್ತೆ ನಾಗವಾರ)

6) ವಿದ್ಯುತ್ ವಿಭಾಗ:- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉಮರ್‌ನಗರ, ರಷಾದ್‌ನಗರ, ಹಿದಾಯತ್‌ನಗರ, ಗಾಂಧಿನಗರ ಹಾಗೂ ಕೆಲವು ಕಡೆ ಬೀದಿ ದೀಪಗಳು ದುಸ್ಥಿತಿಯಲ್ಲಿದ್ದು, ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ಸಂಚರಿಸಲು ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ತೊಂದರೆಯಾಗುತ್ತದೆ ಎಂದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಹೈ ಮಾಸ್ಟ್ ಲೈಟ್ಸ್‌ಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಅಳವಡಿಸಬೇಕೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು

ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ :- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ, 16ನೇ ಮಹಡಿ ಮೆಯೋಹಾಲ್, ಪಿ.ಯು.ಬಿ ಕಟ್ಟಡ)

7) ಘನತ್ಯಾಜ್ಯ ನಿರ್ವಹಣೆ:- ವಾರ್ಡ್ ವ್ಯಾಪ್ತಿಯಲ್ಲಿ ಸರ್ವೋದಯನಗರ ಮುಖ್ಯರಸ್ತೆಯಲ್ಲಿ ಸ್ಮಶಾನವಿದ್ದು, ಸ್ಮಶಾನದ ಕಂಪೌಂಡ್ ಪಕ್ಕದಲ್ಲಿ ಘನತ್ಯಾಜ್ಯ ಸಂಗ್ರಹಣೆ ಕೇಂದ್ರವಿದ್ದು, ಘನತ್ಯಾಜ್ಯವನ್ನು ಸುರಿಯುತ್ತಿರುವುದರಿಂದ ತ್ಯಾಜ್ಯವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಹಾಗೂ ಸ್ಮಶಾನದ ಸುತ್ತಮುತ್ತಲು ಶುಚಿಯಾಗಿಡಬೇಕೆಂದು ತಿಳಿಸಿರುತ್ತಾರೆ ಹಾಗೂ ಗಾಂಧಿನಗರ 2ನೇ ಹಂತದಲ್ಲಿ ಮನೆ ಮನೆಗೆ ಕಸದ ವಾಹನ ಹೋಗದೆ ಇರುವುದರಿಂದ ನಿಯಮಿತವಾಗಿ ಘನತ್ಯಾಜ್ಯ ನಿರ್ವಹಣೆ ಹಾಗೂ ಕಸ ಸಂಗ್ರಹಣೆ ವಿಲೇವಾರಿಯಾಗುತ್ತಿಲ್ಲವೆಂದು ಹಾಗೂ ಅಂಬೇಡ್ಕರ್ ಕಾಲೇಜ್ ಹತ್ತಿರವಿರುವ ಕಸದ ಪಾಯಿಂಟ್‌ನಲ್ಲಿ ಕಸ ಸೋರುವಿಕೆ ಹೆಚ್ಚಾಗಿ ಕಂಡು ಬಂದಿದ್ದು, ಅದನ್ನು ಲಿಚಟ್ ಸಂಗ್ರಹಗೊಳಿಸಲು (Lichat Collection) ಮತ್ತು ಬಿ.ಕೆ ಲೇಔಟ್ 30 ಕೆ.ಜಿ ಜಮ್ ಮಸೀದ್ ಹಿಂಭಾಗ, ನಾರಾಯಣಸ್ವಾಮಿ ಬಡಾವಣೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗೂ ಕಸ ಸಂಗ್ರಹಣೆ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಮತ್ತು ವಾರ್ಡ್‌ನಲ್ಲಿರುವ ಹೋಟೆಲ್‌ಗಳು ಮತ್ತು ಬೇಕರಿಗಳ ಸ್ವಚ್ಛತೆಯನ್ನು ಪರಿಶೀಲಿಸಬೇಕೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ :-ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)

8) ಬಿ.ಎಂ.ಆರ್.ಸಿ.ಎಲ್: - ವಾರ್ಡ್ ವ್ಯಾಪ್ತಿಯಲ್ಲಿ ಅರೇಬಿಕ್ ಕಾಲೇಜ್ ಮುಖ್ಯರಸೆಯಲ್ತಿ ಮೆಟ್ರೋ ಕಾಮಗಾರಿ ನಿರ್ವಹಿಸುತ್ತಿದ್ದು, ಮುಖ್ಯರಸ್ತೆಯ ಚರಂಡಿಗಳನ್ನು ಮುಚ್ಚಿರುವುದರಿಂದ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೇ ರಸ್ತೆಯಲ್ಲೇ ನಿಂತು ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿರುತ್ತದೆ ಮತ್ತು ಗೋವಿಂದಪುರ, ರಷಾದ್‌ನಗರ, ಬಸವಲಿಂಗಪ್ಪ ನಗರದ ಹತ್ತಿರ ಚರಂಡಿಗಳನ್ನು ಮುಚ್ಚಿರುವುದರಿಂದ ಮಳೆಗಾಲದಲ್ಲಿ ನೀರು ಚರಂಡಿಯಲ್ಲೇ ಹರಿಯದೇ ಮನೆಗಳಿಗೆ ನುಗ್ಗಿರುತ್ತದೆ ಎಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಬಿ.ಎಂ.ಆರ್.ಸಿ.ಎಲ್ ಮೆಟ್ರೋ ಇಲಾಖೆ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ :- ಬಿ.ಎಂ.ಆರ್.ಸಿ.ಎಲ್ ಮೆಟ್ರೋ ಇಲಾಖೆ ಬೆಂಗಳೂರು)

9) ಪೋಲೀಸ್ ಇಲಾಖೆ:- ವಾರ್ಡ್ ವ್ಯಾಪ್ತಿಯ ಗೋವಿಂದಪುರ ಸ್ಮಶಾಣ ರಸ್ತೆ, ಅರೇಬಿಕ್ ಕಾಲೇಜ್ ರಷಾದ್‌ನಗರ ಮುಖ್ಯರಸ್ತೆ ರೈಲ್ವೆ ಹಳಿಗಳ ಹತ್ತಿರ ಸರ್ವೋದಯನಗರ ಮುಖ್ಯರಸ್ತೆ, ಬಸವಲಿಂಗಪ್ಪ ನಗರ, ಉಮರ್ ನಗರ, ಗಾಂಧಿನಗರ 2ನೇ ಹಂತ, ವೈಯಾಲಿಕಾವಲ್ ಪ್ರದೇಶಗಳಲ್ಲಿ ಕೆಲವು ದುಷ್ಕರ್ಮಿಗಳು ಗಾಂಜಾ ಸೇದುತ್ತಾ ಕಾನೂನು ಸುವ್ಯವಸ್ಥೆಗೆ ಭಂಗ ಉಂಟುಮಾಡುತ್ತಿದ್ದಾರೆಂದು ಸಭೆಯಲ್ಲಿ ಸ್ಥಳೀಯರು ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಆರಕ್ಷಕ ವೃತ್ತ ನಿರೀಕ್ಷಕರು ಕಾನೂನು ಮತ್ತು ಸುವ್ಯವಸ್ಥೆ ಗೋವಿಂದಪುರ / ಕೆ.ಜಿ.ಹಳ್ಳಿ ಪೋಲೀಸ್ ಠಾಣೆ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ : ಆರಕ್ಷಕ ವೃತ್ತ ನಿರೀಕ್ಷಕರು ಗೋವಿಂದಪುರ / ಕೆ.ಜಿ.ಹಳ್ಳಿ ಪೋಲೀಸ್ ಠಾಣೆ ಬೆಂಗಳೂರು)

10) ಬೃಹತ್ ಮಳೆನೀರು ಗಾಲುವೆ :- ವಾರ್ಡ್ ವ್ಯಾಪ್ತಿಯ ಅಕ್ಷಯ ಅಪಾರ್ಟ್‌ಮೆಂಟ್ ಹತ್ತಿರ ಹಾಗೂ ಚೈತನ್ಯ ಶಾಲೆ ಹತ್ತಿರ ಬೃಹತ್ ಮಳೆ ನೀರುಗಾಲುವೆ ನಿರ್ಮಿಸಿದ್ದು, ಸದರಿ ನೀರುಗಾಲುವೆಯ ಬಿಟ್ಟಿರುವ ಸ್ಥಳದಲ್ಲಿ ಸಂಪೂರ್ಣವಾಗಿ ಪೂರ್ಣಗೊಳಿಸಬೇಕೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ : ಬೃಹತ್ ಮಳೆನೀರು ಗಾಲುವೆ ಬಿ.ಬಿ.ಎಂ.ಪಿ ಬೆಂಗಳೂರು)

**11) ಸಹ ಕಂದಾಯ ಅಧಿಕಾರಿ (ಹೆಚ್.ಬಿ.ಆರ್) :-** ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಎಲೆಕ್ಷನ್ ವೋಟರ್ ಐ.ಡಿ (ಗುರುತಿನ ಚೀಟಿ) ಯನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲವೆಂದು ಈ ವಿಷಯದ ಬಗ್ಗೆ ಸಭೆಯಲ್ಲಿ ತಿಳಿಸಿರುತ್ತಾರೆ.
ಈ ಬಗ್ಗೆ ಸಹ ಕಂದಾಯ ಅಧಿಕಾರಿ, ಹೆಚ್.ಬಿ.ಆರ್ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.
**(ಕ್ರಮ : ಸಹ ಕಂದಾಯ ಅಧಿಕಾರಿ ಹೆಚ್.ಬಿ.ಆರ್ ಉಪ-ವಿಭಾಗ ಬೆಂಗಳೂರು)**

ಮೇಲ್ಕಂಡ ಎಲ್ಲಾ ಅಂಶಗಳು ಕಾರ್ಯರೂಪಕ್ಕೆ ಬಂದಿರುವ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

**ಶ್ರೀ.ನಾಗರಾಜು**
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.23 ನಾಗವಾರ

**(ಶ್ರೀ.ಇಮ್ರಾನ್.ಪಿ.ಎ)**
ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.23 ನಾಗವಾರ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ವಿದ್ಯುತ್ ವಿಭಾಗ, 16ನೇ ಮಹಡಿ, ಪಿ.ಯು.ಬಿ ಬಿಲ್ಡಿಂಗ್, ಮೆಯೋಹಾಲ್, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು ರೈಲ್ವೆ ಇಲಾಖೆ ಬಾಣಸವಾಡಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
8. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಲ್ಯಾಣನಗರ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇ-9, ಉಪ- ವಿಭಾಗ, ಹೊರವರ್ತುಲ ರಸ್ತೆ, ನಾಗವಾರ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಬಿ.ಎಂ.ಆರ್.ಸಿ.ಎಲ್ ಮೆಟ್ರೋ ಇಲಾಖೆ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಆರಕ್ಷಕ ವೃತ್ತ ನಿರೀಕ್ಷಕರು ಗೋವಿಂದಪುರ / ಕೆ.ಜಿ.ಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಕಛೇರಿಕಡತಕ್ಕೆ.